**SL. No. : CC**

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]

**CCE RF**
**CCE RR**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 85-K** **Code No. : 85-K**

# ವಿಷಯ : ಸಮಾಜ ವಿಜ್ಞಾನ

## Subject : SOCIAL SCIENCE

**( ಕನ್ನಡ ಭಾಷಾಂತರ / Kannada Version )**

**( ಹೊಸ ಪಠ್ಯಕ್ರಮ / New Syllabus )**

**( ಶಾಲಾ ಅಭ್ಯರ್ಥಿ + ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Fresh + Regular Repeater )**

ದಿನಾಂಕ : 12. 04. 2017 ] [ Date : 12. 04. 2017

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-30 ರವರೆಗೆ ] [ Time : 9-30 A.M. to 12-30 P.M.

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 47 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.

ಇಲ್ಲಿ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** $10 \times 1 = 10$

1. ರೆಗ್ಯೂಲೇಟಿಂಗ್ ಶಾಸನದ ಒಂದು ಪ್ರಮುಖ ಅಂಶ

   (A) ಅಖಿಲ ಭಾರತೀಯ ಸಂಯುಕ್ತ ವ್ಯವಸ್ಥೆಗೆ ಅವಕಾಶ ಮಾಡಿಕೊಟ್ಟಿತು

   (B) ಮತೀಯ ಚುನಾವಣಾ ಕ್ಷೇತ್ರಗಳ ರಚನೆ

   (C) ಸರ್ವೋಚ್ಚ ನ್ಯಾಯಾಲಯದ ಸ್ಥಾಪನೆ

   (D) ಪ್ರಾಂತ್ಯಗಳಲ್ಲಿ ದ್ವಿ-ದಳ ಸರ್ಕಾರ ಪದ್ಧತಿಯನ್ನು ಜಾರಿಗೊಳಿಸಿತು

2. **A ಪಟ್ಟಿ**ಯಲ್ಲಿ ನಾಯಕರು ಮತ್ತು **B ಪಟ್ಟಿ**ಯಲ್ಲಿ ಅವರು ನಿರ್ವಹಿಸಿದ ಪಾತ್ರವನ್ನು ನೀಡಲಾಗಿದೆ. ಅವುಗಳಿಗೆ ಸರಿಹೊಂದುವ ಉತ್ತರದ ಗುಂಪನ್ನು ಗುರುತಿಸಿ :

| ***A ಪಟ್ಟಿ*** | ***B ಪಟ್ಟಿ*** |
|---|---|
| (a) ಫ್ರಾನ್ಸಿಸ್ ಫರ್ಡಿನೆಂಡ್ | (i) ರಷ್ಯಾದ ಅಧ್ಯಕ್ಷ |
| (b) ಹಿಟ್ಲರ್ | (ii) ಆಸ್ಟ್ರಿಯಾದ ರಾಜಕುಮಾರ |
| (c) ಮುಸೋಲಿನಿ | (iii) ಜರ್ಮನಿಯ ಸರ್ವಾಧಿಕಾರಿ |
| (d) ಜೋಸೆಫ್ ಸ್ಟಾಲಿನ್ | (iv) ಇಟಲಿಯ ಸರ್ವಾಧಿಕಾರಿ |

| | ***a*** | ***b*** | ***c*** | ***d*** |
|---|---|---|---|---|
| (A) | ii | iii | iv | i |
| (B) | i | ii | iii | iv |
| (C) | iv | i | ii | iii |
| (D) | iii | iv | i | ii |

3. ವಿಶ್ವಸಂಸ್ಥೆಯ ಪ್ರಧಾನ ಕಚೇರಿ ಇರುವುದು

   (A) ಪ್ಯಾರಿಸ್ (B) ಜಿನೇವಾ

   (C) ವಾಷಿಂಗ್ಟನ್ (D) ನ್ಯೂಯಾರ್ಕ್

4. ಜಾಗತಿಕ ಶಾಂತಿಗಾಗಿ ಪ್ರಾರಂಭವಾಗಿದ್ದ 'ಲೀಗ್ ಆಫ್ ನೇಶನ್ಸ್' ವಿಫಲತೆ ಹೊಂದಲು ಕಾರಣ

(A) ವಿಶ್ವಸಂಸ್ಥೆ ಸ್ಥಾಪನೆಯಾಯಿತು

(B) 1939ರಲ್ಲಿ ದ್ವಿತೀಯ ಮಹಾಯುದ್ಧ ಪ್ರಾರಂಭವಾಯಿತು

(C) ಮೊದಲನೆಯ ಮಹಾಯುದ್ಧ ಕೊನೆಗೊಂಡಿತು

(D) ಅಮೆರಿಕಾ ಮತ್ತು ರಷ್ಯಾದ ನಡುವೆ ಶೀತಲ ಸಮರ ಆರಂಭವಾಯಿತು

5. 'ಮಾನವಕುಲ ತಾನೊಂದೇ ವಲಂ' ಎಂದು ಹೇಳಿದ ಕನ್ನಡದ ಕವಿ

(A) ರನ್ನ (B) ಪಂಪ

(C) ಜನ್ನ (D) ಪೊನ್ನ

6. ಈ ನಕ್ಷೆಯಲ್ಲಿ ಗುರುತಿಸಿರುವ ನದಿ ಕಣಿವೆ ಯೋಜನೆಗಳನ್ನು ಸರಿಯಾಗಿ ಹೋಲಿಕೆಯಾಗುವುದು :




(A) 1 — ತುಂಗಭದ್ರಾ, 2 — ಭಾಕ್ರಾ–ನಂಗಲ್, 3 — ಕೋಸಿ

(B) 1 — ಹಿರಾಕುಡ್, 2 — ಕೋಸಿ, 3 — ಭಾಕ್ರಾ–ನಂಗಲ್

(C) 1 — ಭಾಕ್ರಾ–ನಂಗಲ್, 2 — ತುಂಗಭದ್ರಾ, 3 — ಹಿರಾಕುಡ್

(D) 1 — ಕೋಸಿ, 2 — ಹಿರಾಕುಡ್, 3 — ತುಂಗಭದ್ರಾ

7. ಭಾರತದಿಂದ ಅಭ್ರಕದ ರಫ್ತು ಕಡಿಮೆಯಾಗಿದೆ. ಏಕೆಂದರೆ,

(A) ಇದರ ಉತ್ಪಾದನೆ ಕಡಿಮೆಯಾಗಿದೆ

(B) ಇದರ ಉತ್ಪಾದನೆ ಅಧಿಕವಾಗಿದೆ

(C) ಅಭ್ರಕಕ್ಕೆ ಬದಲಿ ವಸ್ತು ಲಭ್ಯವಾಗುತ್ತಿದೆ

(D) ಇದು ಕಬ್ಬಿಣೇತರ ಖನಿಜವಾಗಿದೆ

8. ಭಾರತದ 'ಆರ್ಥಿಕ ಯೋಜನೆಯ ಪಿತಾಮಹ'

(A) ಸರ್ ಎಂ. ವಿಶ್ವೇಶ್ವರಯ್ಯ (B) ನಾರಾಯಣಮೂರ್ತಿ

(C) ಡಾ॥ ನಾರ್ಮನ್ ಬೋರ್ಲಾಗ್ (D) ಡಾ॥ ಪ್ರತಾಪ ರೆಡ್ಡಿ

9. ರಾಮು ಭವಿಷ್ಯದಲ್ಲಿ ತನ್ನ ಮಗಳ ಮದುವೆಗಾಗಿ ಹಣ ಕೂಡಿಡಲು ಬಯಸುತ್ತಾನೆ. ನೀವು ಸಲಹೆ ನೀಡುವ ಬ್ಯಾಂಕ್ ಖಾತೆಯ ಪ್ರಕಾರ

(A) ಉಳಿತಾಯ ಖಾತೆ (B) ಆವರ್ತ ಠೇವಣಿ ಖಾತೆ

(C) ಚಾಲ್ತಿ ಖಾತೆ (D) ನಿಶ್ಚಿತ ಠೇವಣಿ ಖಾತೆ

10. ಭಾರತದ ಮಾರುಕಟ್ಟೆಯಲ್ಲಿ ಬೇರೆಬೇರೆ ದೇಶಗಳ ವಸ್ತುಗಳು ದೊರೆಯುತ್ತವೆ. ಇದಕ್ಕೆ ಕಾರಣವಾದ ಪ್ರಕ್ರಿಯೆ

(A) ಜಾಗತೀಕರಣ (B) ಔದ್ಯೋಗೀಕರಣ

(C) ಖಾಸಗೀಕರಣ (D) ನಗರೀಕರಣ

II. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ *ಒಂದೊಂದು* ವಾಕ್ಯದಲ್ಲಿ ಉತ್ತರ ಬರೆಯಿರಿ :** $14 \times 1 = 14$

11. ಕಾಲಚಕ್ರ ಎಂದರೇನು ?

12. ಸ್ವತಂತ್ರ ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರು ಯಾರು ?

13. ಸರ್ದಾರ್ ವಲಭಭಾಯ್ ಪಟೇಲ್‌ರನ್ನು 'ಭಾರತದ ಉಕ್ಕಿನ ಮನುಷ್ಯ' ಎಂದು ಕರೆಯುತ್ತಾರೆ. ಏಕೆ ?

14. ಡಾ॥ ಡಿ.ಎಂ. ನಂಜುಂಡಪ್ಪ ಸಮಿತಿಯನ್ನು ಏಕೆ ರಚಿಸಲಾಯಿತು ?

15. ಭಾರತದ ವಿದೇಶಾಂಗ ನೀತಿಯನ್ನು 'ನೆಹರೂರವರ ವಿದೇಶಾಂಗ ನೀತಿ' ಎಂದು ಬಣ್ಣಿಸಲಾಗಿದೆ. ಏಕೆ ?

16. ಜನಮಂದೆಯು ಯಾವಾಗ ದೊಂಬಿಯಾಗಿ ಪರಿವರ್ತನೆಯಾಗುತ್ತದೆ ?

17. ಚಿಪ್ಕೋ ಚಳುವಳಿಯನ್ನು ಏಕೆ ಪ್ರಾರಂಭಿಸಲಾಯಿತು ?

18. ಉತ್ತರದ ಮೈದಾನವನ್ನು ಸಂಚಯನ ಮೈದಾನವೆಂದು ಕರೆಯುತ್ತಾರೆ. ಏಕೆ ?

19. ದಾಮೋದರ್ ನದಿಯನ್ನು ಬಂಗಾಳದ 'ಕಣ್ಣೀರಿನ ನದಿ' ಎಂದು ಕರೆಯುತ್ತಿದ್ದರು. ಏಕೆ ?

20. ಭಾರತದ ಪಶ್ಚಿಮ ಕರಾವಳಿ ತೀರದಲ್ಲಿ ಕಡಲ ಕೊರೆತವು ಹೆಚ್ಚಾಗಿರುತ್ತದೆ. ಏಕೆ ?

21. ಕಡಲ ತೀರದುದ್ದಕ್ಕೂ ಮ್ಯಾಂಗ್ರೋವ್ ಅರಣ್ಯಗಳನ್ನು ಏಕೆ ಬೆಳೆಸಬೇಕು ?

22. ಡಾ|| ಎಂ.ಎಸ್. ಸ್ವಾಮಿನಾಥನ್‌ರವರನ್ನು 'ಭಾರತದ ಹಸಿರು ಕ್ರಾಂತಿಯ ಪಿತಾಮಹ' ಎಂದು ಕರೆಯುತ್ತಾರೆ. ಏಕೆ ?

23. 'ಭಾರತದ ನೈಜ ಅಭಿವೃದ್ಧಿ ಎಂದರೆ, ಅದು ಗ್ರಾಮಗಳ ಅಭಿವೃದ್ಧಿ' ಎಂದು ಯಾರು ಹೇಳಿದರು ?

24. ಜಾಗತೀಕರಣದಿಂದ ಸರಕುಗಳ ಬೆಲೆ ಕಡಿಮೆಯಾಗುತ್ತದೆ. ಹೇಗೆ ?

III. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ *ಎರಡರಿಂದ ನಾಲ್ಕು* ವಾಕ್ಯಗಳಲ್ಲಿ ಉತ್ತರಿಸಿ :** 15 × 2 = 30

25. ದ್ವಿ-ಸರ್ಕಾರ ಪದ್ಧತಿಯನ್ನು ವಿವರಿಸಿ.

26. ಮುಂಬೈ–ಕರ್ನಾಟಕದ ಪ್ರದೇಶಗಳಾವುವು ?

27. ಸ್ವಾಮಿ ವಿವೇಕಾನಂದರು ಯುವಶಕ್ತಿಯ ಪ್ರೇರಕರಾಗಿದ್ದರು. ಹೇಗೆ ?

28. ಚೀನಾ ಕ್ರಾಂತಿಯ ಪರಿಣಾಮಗಳನ್ನು ವಿವರಿಸಿ.

***ಅಥವಾ***

ಫ್ಯಾಸಿಸ್ಟ್ ವಾದದ ಲಕ್ಷಣಗಳನ್ನು ವಿವರಿಸಿ.

29. ಜನಸಂಖ್ಯಾ ಸ್ಫೋಟವು ಹಲವಾರು ಸಮಸ್ಯೆಗಳ ಉಗಮಕ್ಕೆ ಹೇಗೆ ಕಾರಣವಾಗುತ್ತದೆ ?

30. ಭಯೋತ್ಪಾದಕತೆಯಿಂದ ಉಂಟಾಗುವ ಪರಿಣಾಮಗಳನ್ನು ವಿವರಿಸಿ.

31. 'ವರದಕ್ಷಿಣೆ ಒಂದು ಸಾಮಾಜಿಕ ಪಿಡುಗು'. ವಿವರಿಸಿ.

32. ಭಾರತದ ವ್ಯವಸಾಯವು 'ಮಾನ್ಸೂನ್ ಮಾರುತಗಳ ಜೊತೆಗೆ ಆಡುವ ಜೂಜಾಟವಾಗಿದೆ.' ಸಮರ್ಥಿಸಿ.

33. ಮಣ್ಣಿನ ಸವೆತವನ್ನು ತಡೆಗಟ್ಟುವುದು ಅಗತ್ಯವಾಗಿದೆ. ಏಕೆ ?

34. ಭಾರತದಲ್ಲಿ ಎಲೆ ಉದುರುವ ಅರಣ್ಯಗಳ ಲಕ್ಷಣಗಳನ್ನು ತಿಳಿಸಿ.

35. ದೂರ ಸಂವೇದಿ ತಂತ್ರಜ್ಞಾನವು ನೈಸರ್ಗಿಕ ವಿಕೋಪಗಳ ನಿರ್ವಹಣೆಯಲ್ಲಿ ಹೇಗೆ ಸಹಾಯಕವಾಗುತ್ತದೆ ?

36. 'ಭಾರತದಲ್ಲಿ ತೋಟಗಾರಿಕಾ ಬೇಸಾಯವು ಅಪಾರವಾದ ಪ್ರಗತಿಯನ್ನು ಸಾಧಿಸುತ್ತಿದೆ.' ವಿವರಿಸಿ.

37. ಗ್ರಾಮಗಳಿಂದ ನಗರಗಳಿಗೆ ಮಾನವರು ವಲಸೆ ಹೋಗುವುದರಿಂದ ಉಂಟಾಗುವ ಸಮಸ್ಯೆಗಳನ್ನು ತಿಳಿಸಿ.

38. ರಾಷ್ಟ್ರೀಯ ಆದಾಯದ ಮೂಲಕ ದೇಶದ ಅಭಿವೃದ್ಧಿಯನ್ನು ಅಳೆಯುವುದು ಸಮಂಜಸವಲ್ಲ. ಏಕೆ ?

39. ಉದ್ಯಮಗಾರಿಕೆಯು ಸೃಜನಾತ್ಮಕ ಚಟುವಟಿಕೆಯಾಗಿದೆ. ಏಕೆ ?

IV. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

40. 'ಅನೇಕ ಆರ್ಥಿಕ ಬದಲಾವಣೆಗಳು 1857 ರ ದಂಗೆಗೆ ಕಾರಣವಾದವು.' ಸಮರ್ಥಿಸಿ.

***ಅಥವಾ***

ಸಾರಿಗೆ, ಸಂಪರ್ಕ ಹಾಗೂ ಪತ್ರಿಕೋದ್ಯಮದ ಬೆಳವಣಿಗೆಯು ಭಾರತದ ಸ್ವಾತಂತ್ರ್ಯ ಚಳುವಳಿಗೆ ಮೂಲ ಕಾರಣವಾಯಿತು. ಹೇಗೆ ?

41. ಪ್ರಚಲಿತ ಜಗತ್ತಿಗೆ ನಿಶಸ್ತ್ರೀಕರಣ ಅತೀ ಅಗತ್ಯ ಎಂದು ಭಾರತ ಏಕೆ ಪ್ರತಿಪಾದಿಸುತ್ತದೆ ?

***ಅಥವಾ***

'ಭಾರತ ಮತ್ತು ಅಮೆರಿಕಾ ದೇಶಗಳ ನಡುವಿನ ಪರಸ್ಪರ ಸಂಬಂಧವು ಸೌಹಾರ್ದಯುತವಾಗಿದೆ.' ಸ್ಪಷ್ಟೀಕರಿಸಿ.

42. ಅಸ್ಪೃಶ್ಯತಾ ನಿವಾರಣೆಗೆ ತೆಗೆದುಕೊಂಡಿರುವ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳನ್ನು ವಿವರಿಸಿ.

***ಅಥವಾ***

ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳನ್ನು ವಿವರಿಸಿ.

43. ಭಾರತದ ಪ್ರಮುಖ ಬಂದರುಗಳಾವುವು ?

***ಅಥವಾ***

ಭಾರತದ ಪ್ರಧಾನ ಕೈಗಾರಿಕಾ ವಲಯಗಳು ಯಾವುವು ?

44. ವಿಕೇಂದ್ರೀಕರಣದ ಹಿನ್ನೆಲೆಯಲ್ಲಿ ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಕಲ್ಪನೆಯನ್ನು ವಿವರಿಸಿ.

***ಅಥವಾ***

ಸಾರ್ವಜನಿಕ ಹಣಕಾಸು ಮತ್ತು ವೈಯಕ್ತಿಕ ಹಣಕಾಸುಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

45. 'ಅಂಚೆ ಕಚೇರಿಗಳು ಅನೇಕ ಹಣಕಾಸಿನ ವ್ಯವಹಾರಗಳನ್ನೂ ಸಹ ಕೈಗೊಳ್ಳುತ್ತಿವೆ.' ಸಮರ್ಥಿಸಿ.

***ಅಥವಾ***

ಜೀವ ವಿಮೆಯು ಏಕೆ ಅವಶ್ಯಕ ?

V. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ *ಎಂಟರಿಂದ ಹತ್ತು* ವಾಕ್ಯಗಳಲ್ಲಿ ಉತ್ತರಿಸಿ :** 4

46. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಂದಗಾಮಿಗಳ ಪಾತ್ರವನ್ನು ವಿವರಿಸಿ.

VI. 47. **ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ :** 1 + 3 = 4

a) ಬಾಂಬೆ ಹೈ

b) ಕೊಂಕಣ ತೀರ

c) ಬೆಂಗಳೂರು

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 47 ರ ಬದಲಿಗೆ)***

ಭಾರತೀಯರ ಜನಜೀವನಕ್ಕೆ ಹಿಮಾಲಯ ಪರ್ವತದಿಂದಾಗುವ ಅನುಕೂಲಗಳೇನು ? 4